**ದಿನಾಂಕ: 26-05-2011 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಪ್ರಧಾನ ಅಭಿಯಂತರರು |
| 2 | ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | 2 | ಕೌನ್ಸಿಲ್ ಕಾರ್ಯದರ್ಶಿ |
| 3 | ಎನ್.ಶಕುಂತಲ | ಸದಸ್ಯರು | 3 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 4 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 5 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 5 | ವಲಯ ಅರಣ್ಯಾಧಿಕಾರಿಗಳು(ಪೂರ್ವ /ಪಶ್ಚಿಮ/ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 6 | ಎಸ್.ಕೇಶವಮೂರ್ತಿ | ಸದಸ್ಯರು | | |
| 7 | ಅಶ್ವಥ್‌ನಾರಾಯಣ.ಜಿ.ಎ. | ಸದಸ್ಯರು | | ತೋಟಗಾರಿಕೆ ಅಧೀಕ್ಷಕರು(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 8 | ಎಸ್.ವಿಜಯನ್ | ಸದಸ್ಯರು | | |
| 9 | ನಿರ್ಮಲ | ಸದಸ್ಯರು | 7 | ಕಾ.ಪಾ.ಅ.(ಯೋಜನೆ(ಪೂರ್ವ/ಪಶ್ಚಿಮ/ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| | | | 8 | ಕಾರ್ಯಪಾಲಕ ಅಭಿಯಂತರರು(ಯೋಜನೆ-ಕೆರೆಗಳು) |

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಸಮಿತಿಯು ರೂಪುಗೊಂಡ ನಂತರ ಪ್ರಥಮವಾಗಿ ಈ ದಿನ ಸಭೆ ಸೇರಿದ್ದು, ಹಾಜರಿರುವ ಎಲ್ಲಾ ಅಧಿಕಾರಿಗಳು ತಮ್ಮ ತಮ್ಮ ಪರಿಚಯವನ್ನು ಸಭೆಗೆ ಮಾಡಿಕೊಡುವಂತೆ ಸೂಚಿಸಿದರು.

ಅಧ್ಯಕ್ಷರು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಉದ್ದೇಶಿಸಿ, ಅರಣ್ಯ ಇಲಾಖೆ ಬಗ್ಗೆ ವಲಯ ಮಟ್ಟದಲ್ಲಿ ಎರಡು ವರ್ಷದಿಂದ ಏನೇನು ಕೆಲಸ ಕಾರ್ಯಗಳಾಗಿವೆ ಎಂಬ ಬಗ್ಗೆ ಕೂಲಂಕುಷವಾಗಿ ವಿವರಣೆ ನೀಡುವಂತೆ ಸೂಚಿಸಿದರು.

**ಶ್ರೀ.ಆರ್.ಸುರೇಶ್, ವಲಯ ಅರಣ್ಯಾಧಿಕಾರಿ(ಯಲಹಂಕ),** ರವರು ಮಾತನಾಡುತ್ತಾ, ಈ ಮೊದಲು ಯಲಹಂಕ ವಲಯವು ಬ್ಯಾಟರಾಯನಪುರ ಎಂದು ಗುರುತಿಸಲ್ಪಡುತ್ತಿದ್ದು, ಈಗ ಯಲಹಂಕ ವಲಯ ಎಂದಾಗಿದೆ. ಇದರಲ್ಲಿ 1 ರಿಂದ 11 ವಾರ್ಡ್‌ಗಳು ಬರುತ್ತವೆ. ರಸ್ತೆ ಅಗಲೀಕರಣ ಸಮಯದಲ್ಲಿ ನಾಶಗೊಂಡ ಸ್ಥಳದಲ್ಲಿ ಸಸಿಗಳನ್ನು ನೆಟ್ಟು, ಕಡಿಮೆ ದರವೆಂದು, ಮರದ ಟ್ರೀಗಾರ್ಡ್‌ಗಳನ್ನು ಹಾಕುತ್ತಿದ್ದು, ಇದನ್ನು ಒಂದು ವರ್ಷದವರೆಗೆ ಕಾಪಾಡಿದರೆ ಮುಂದಕ್ಕೆ ಅವುಗಳಿಗೆ ಟ್ರೀಗಾರ್ಡ್‌ಗಳ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿದರು. ಸಸಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ಖಾಲಿ ಜಾಗಗಳಲ್ಲಿ, ಸಂಸ್ಥೆಗಳ ಆವರಣಗಳಲ್ಲಿ, ಶಾಲೆ ಮತ್ತು ಕಾಲೇಜುಗಳ ಆವರಣಗಳಲ್ಲಿ ನೆಟ್ಟು, ಅವುಗಳ ಉಪಯುಕ್ತತೆ ಹಾಗೂ ಹಸಿರು ಕ್ರಾಂತಿಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಬಡಾವಣೆಗಳಿರುವ ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳಿಗೆ ಮರಗಳ ರೆಂಬೆಗಳು ತಾಗದಂತೆ, ವಸತಿ ಕಟ್ಟಡಗಳಿಗೆ ಹಾನಿಯಾಗದಂತಹ ಸಣ್ಣ ಸಣ್ಣ ಮರಗಳನ್ನು ನೆಡಲಾಗುತ್ತದೆ. ನೂರು ಮರಗಳನ್ನು ನೆಟ್ಟರೆ ಅವುಗಳಲ್ಲಿ ಕೆಲವು ರಸ್ತೆ ಅಗಲೀಕರಣ ಅಥವಾ ರಸ್ತೆ ಅಗೆತದ ಸಂದರ್ಭದಲ್ಲಿ, ಹಾಗೂ ದನಕರುಗಳು ಅವುಗಳನ್ನು ಹಾಳು ಮಾಡಿದಂತಹ ಸಮಯದಲ್ಲಿ ನೂರಕ್ಕೆ 20% ರಿಂದ 30 % ಸಸಿಗಳು ನಾಶವಾಗುತ್ತವೆ.

ಮುಂದಿನ ವರ್ಷ ಖಾಲಿ ಇರುವ ಸ್ಥಳಗಳಲ್ಲಿ ಸಸಿಗಳನ್ನು ನೆಡುವ ಕಾರ್ಯ ಮಾಡಲಾಗುತ್ತದೆ. ಈ ಕುರಿತು ಮೇಲಾಧಿಕಾರಿಗಳಾದ ಉಪ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಕಾಲ ಕಾಲಕ್ಕೆ ತಪಾಸಣೆ ನಡೆಸಿ ಸಲಹೆ ಸೂಚನೆಗಳನ್ನು ನೀಡುತ್ತಿರುತ್ತಾರೆ. 58 ಉದ್ಯಾನವನಗಳಲ್ಲಿ ತೋಟಗಾರಿಕೆ ಅಧಿಕಾರಿಗಳೊಂದಿಗೆ ಜೊತೆಗೂಡಿ ಔಷಧಿಯುಕ್ತ ಮರಗಳನ್ನು, ಉಪಯುಕ್ತ ಹಣ್ಣಿನ ಮರಗಳನ್ನು ನೆಡಲಾಗುತ್ತಿದೆ. ನರ್ಸರಿಯಲ್ಲಿ ಗಿಡಗಳನ್ನು ಬೆಳೆಸಿ ಪೋಷಿಸಿಲಾಗುತ್ತಿದ್ದು, ಅವುಗಳನ್ನು ಅಧ್ಯಕ್ಷರ ಆದೇಶ ಹಾಗೂ ಪಾಲಿಕೆ ಸದಸ್ಯರುಗಳ ಆದೇಶದ ಪ್ರಕಾರ, ಸೂಚಿಸುವ ಸ್ಥಳಗಳಲ್ಲಿ ಸಸಿಗಳನ್ನು ನೆಡುವ ವ್ಯವಸ್ಥೆ ಮಾಡಲಾಗುತ್ತದೆಂದು ತಿಳಿಸಿದರು.

**ಶ್ರೀ.ಎಂ.ನಾಗರಾಜ್, ವಲಯ ಅರಣ್ಯಾಧಿಕಾರಿ(ಪೂರ್ವ)** : ಪಾಲಿಕೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಮಳೆಗಾಳಿಗೆ ಮರಗಳನ್ನು ಬೀಳುತ್ತಿರುವುದರಿಂದ, ವೇಗವಾಗಿ, ಬಹು ಎತ್ತರಕ್ಕೆ ಬೆಳೆಯುವ ಮರಗಳನ್ನು ಹಾಕುತ್ತಿಲ್ಲವೆಂದು, ಹೊಂಗೆ ಮರಗಳಂತಹ ಹಗುರ ಮರಗಳನ್ನು ನೆಟ್ಟು ಪೋಷಿಸಲಾಗುತ್ತಿದೆಯೆಂದು, ಈ ಸಾಲಿನಲ್ಲಿ ಸಹ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆಂದು ತಿಳಿಸಿದರು.

**ಶ್ರೀ.ಸಿ.ನಾಗಭೂಷಣ್, ವಲಯ ಅರಣ್ಯಾಧಿಕಾರಿ(ದಕ್ಷಿಣ)** : ಪಾಲಿಕೆಯ ದಕ್ಷಿಣ ವಲಯದಲ್ಲಿ ಎಂಟು ಎಂಎಲ್ಎ ಕ್ಷೇತ್ರಗಳಿದ್ದು, ಎಲ್ಲಾ ಅಭಿವೃದ್ಧಿ ಹೊಂದಿದ ಪ್ರದೇಶವಾಗಿರುವುದರಿಂದ ರಸ್ತೆಗಳ ಬದಿಯನ್ನು ಕಾಂಕ್ರೀಟ್‌ನಿಂದ ಮುಚ್ಚಿ, ಸಿಮೆಂಟ್ ಸ್ಲ್ಯಾಬ್‌ಗಳನ್ನು ಅಳವಡಿಸಿರುತ್ತಾರೆ. ಮರಗಳನ್ನು ನಿರ್ವಹಣೆ ಮಾಡುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ. ಟೆಂಡರ್ ಕರೆದು, Extra Tree Maintenance ಮಾಡುವ ಗುತ್ತಿಗೆದಾರರಿಗೆ ಕಳೆದ ಒಂದು ವರ್ಷದಿಂದ ವೇತನವನ್ನು ಪಾವತಿಸಿರುವುದಿಲ್ಲವೆಂದು ತಿಳಿಸಿದರು. ಆದುದರಿಂದ, ಮಳೆಗಾಳಿಗೆ ಮರಗಳು ಬಿದ್ದರೂ ಸಹ ತೆಗೆಯಲು ನಿರಾಕರಿಸುತ್ತಾರೆ. ಸಾರ್ವಜನಿಕರಿಗೆ ತೊಂದರೆಯಾಗುವ ದೃಷ್ಠಿಯಿಂದ ಬೇರೆಯವರನ್ನು ಕರೆದು ಬಿದ್ದ ಮರಗಳನ್ನು ಸಾಗಿಸಲಾಗುತ್ತಿದೆಯೆಂದು ತಿಳಿಸಿದರು ಮತ್ತು ಅವುಗಳನ್ನು ಹಾಕುವುದಕ್ಕೆ ಡಿಪೋ ವ್ಯವಸ್ಥೆ ಸಹ ಇಲ್ಲವೆಂದು ತಿಳಿಸಿದರು.

**ಶ್ರೀಮತಿ.ಎನ್.ಶಕುಂತಲ, ಸದಸ್ಯರು** ಮಾತನಾಡುತ್ತಾ, ಮಳೆ ಗಾಳಿಯಿಂದ ಬೀಳುವ ಮರಗಳನ್ನು ತಕ್ಷಣವೇ ತೆಗೆಯುವ ಕಾರ್ಯ ನಡೆಯಬೇಕು. ಇಲ್ಲದಿದ್ದರೆ, ರಸ್ತೆಯಲ್ಲಿ ಓಡಾಡುವ ಜನರಿಗೆ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ ಮತ್ತು ಶಿಥಿಲ ಮರಗಳನ್ನು ಮಳೆಗಾಲಕ್ಕೆ ಮುಂಚಿತವಾಗಿ ಗುರುತಿಸಿ ತೆಗೆಯಲು ತಿಳಿಸಿದರು.

**ಶ್ರೀ.ಆರ್.ಸುರೇಶ್, ವಲಯ ಅರಣ್ಯಾಧಿಕಾರಿ(ಯಲಹಂಕ),** ರವರು ಮಾತನಾಡುತ್ತಾ, ಯಾವುದೇ ಮರಗಳನ್ನು ಕಡೆಯಬೇಕಾದರೂ ಸಹ ಅರಣ್ಯಾಧಿಕಾರಿಗಳ ಅನುಮತಿ ಪಡೆಯಬೇಕಾಗುತ್ತದೆ. ರಸ್ತೆ ಅಗಲೀಕರಣ ಸಂದರ್ಭದಲ್ಲಿ ತೆಗಯಲಾದ ಮರಗಳನ್ನು, ಶಿಥಿಲಗೊಂಡು ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು, ಸಾರ್ವಜನಿಕರ ಮನವಿ ಮೇರೆಗೆ ಕಟ್ಟಡಗಳಿಗೆ ಹಾನಿ ಉಂಟು ಮಾಡುವಂತಹ ಮರಗಳನ್ನು ಹಾಗೂ ಮಳೆ ಗಾಳಿಗೆ ಬೀಳುವ ಮರಗಳನ್ನು ಕತ್ತರಿಸಲು ಒಂದು ದಿನಕ್ಕೆ ದರ ನಿಗಧಿ ಮಾಡಿ, ಟೆಂಡರ್ ಕರೆಯಲಾಗುತ್ತದೆ. ಟೆಂಡರ್ ಕರೆಯಲು ಸಾಧ್ಯವಿಲ್ಲದ ಕಡೆ ತುಂಡು ಗುತ್ತಿಗೆಗೆ ನೀಡಲಾಗುತ್ತದೆ. ನಂತರ ಅವುಗಳನ್ನು ಪಾಲಿಕೆಯ ಡಿಪೋಗಳಿಗೆ ಸಾಗಿಸಿ, ನಂತರ ಅವುಗಳನ್ನು

ಜಾತೀವಾರು ವಿಂಗಡಿಸಿ ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತದೆಂದು ತಿಳಿಸಿದರು. ಮರಗಳನ್ನು ಕತ್ತರಿಸಲು ಈಗ ಹೊಸ ತರಹ ಮಿಷನ್ ಬಂದಿರುವುದಾಗಿ ತಿಳಿಸಿ, ಅದರ ಉಪಯೋಗದ ಬಗ್ಗೆ ವಿವರಣೆ ನೀಡಿ, ಪಾಲಿಕೆಯಿಂದ ಇಂತಹಹ ಒಂದು ಮಿಷನ್‌ನ್ನು ಖರೀದಿ ಮಾಡಿದರೆ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲು ಅನುಕೂಲವಾಗುತ್ತದೆಂದು ತಿಳಿಸಿದರು.

**ಶ್ರೀ.ಆರ್.ಎಸ್.ಸತ್ಯನಾರಾಯಣ, ಸದಸ್ಯರು** ಮಾತನಾಡುತ್ತಾ, ಅರಣ್ಯ ಇಲಾಖೆಯಲ್ಲಿ ಎಷ್ಟು ಮಂಜೂರಾತಿ ಹುದ್ದೆಗಳಿವೆ? ಎಷ್ಟು ಜನ ಅರಣ್ಯಾಧಿಕಾರಿಗಳಿದ್ದಾರೆ, ಅವರುಗಳಿಗೆ ಯಾರು ವೇತನವನ್ನು ಪಾವತಿಸುತ್ತಾರೆ ಎಂಬ ಬಗ್ಗೆ ವಿವರಣೆಯನ್ನು ನೀಡುವಂತೆ ತಿಳಿಸಿದರು.

**ಶ್ರೀಮತಿ.ಗೀತಾ ಶ್ರೀನಿವಾಸ ರೆಡ್ಡಿ, ಸದಸ್ಯರು,** ಮಾತನಾಡುತ್ತಾ, ಮರಗಳು ಬಿದ್ದು ಒಂದು ತಿಂಗಳಾದರೂ ಅವುಗಳನ್ನು ಪೂರ್ತಿಯಾಗಿ ತೆಗೆಯುವುದಿಲ್ಲವೆಂದು, ಮರದ ಕಾಂಡ, ಬೇರುಗಳು ಹಾಗೆಯೇ ಉಳಿಯುತ್ತವೆಂದು ಇದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದರಿಂದ, ಕೂಡಲೇ ಅವುಗಳನ್ನು ತೆಗೆಯಲು ಕ್ರಮ ತೆಗೆದುಕೊಳ್ಳಲು ತಿಳಿಸಿದರು ಮತ್ತು ಮನೆಗಳ ಮುಂದೆ ನೆಟ್ಟ ಗಿಡಗಳ ಪೋಷಣೆ ಜವಾಬ್ದಾರಿಯನ್ನು ಆಯಾ ಮನೆಯವರಿಗೆ ವಹಿಸಿದರೆ ಸೂಕ್ತವೆಂದು ಸಲಹೆ ನೀಡಿದರು.

**ಶ್ರೀ.ಆರ್.ಎಸ್.ಸತ್ಯನಾರಾಯಣ, ಸದಸ್ಯರು** ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಉದ್ಯಾನವನಗಳು ಹಾಗೂ ಕೆರೆಗಳು ಬರುತ್ತವೆ. ಅವುಗಳ ಅಭಿವೃದ್ಧಿ ಮತ್ತು ನಿರ್ವಹಣೆ ಬಗ್ಗೆ ವಿವರಗಳನ್ನು ಸಮಿತಿಗೆ ನೀಡಲು ತಿಳಿಸಿದರು.

**ಶ್ರೀ.ಎಂ.ಪುಟ್ಟಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ(ದಕ್ಷಿಣ)** ರವರು ಮಾತನಾಡುತ್ತಾ, ನರ್ಸರಿಗಳಲ್ಲಿ ಸಸಿಗಳನ್ನು ಬೆಳೆಸಿ ಪೋಷಿಸಲಾಗುತ್ತಿದ್ದು, ಅವುಗಳನ್ನು ಇಷ್ಟು ವರ್ಷಗಳಿಂದ ಅರಣ್ಯ ಇಲಾಖೆಯವರು ಅವಶ್ಯಕತೆ ಇರುವ ಕಡೆ, ಮೇಲಾಧಿಕಾರಿಗಳ ಆದೇಶದ ಮೇರೆಗೆ ನೆಡುತ್ತಿದ್ದರು. ಈಗ ಇಂಜಿನಿಯರಿಂಗ್ ಇಲಾಖೆಯವರಿಗೆ ಆ ಕಾರ್ಯವನ್ನು ವಹಿಸಿದರೆ ಅರಣ್ಯ ಇಲಾಖೆಯವರು ಯಾವ ಕೆಲಸಗಳನ್ನು ಮಾಡಬೇಕು ಎಂಬ ಬಗ್ಗೆ ಗೊಂದಲವಾಗುತ್ತದೆಂದು ತಿಳಿಸಿದರು. ಕಳೆದ ವರ್ಷದಲ್ಲಿ ಮಾಡಿದಂತಹ ಕೆಲಸಗಳಿಗೆ ಇನ್ನು ಹಣ ನೀಡಿಲ್ಲವೆಂದು ಹಾಗೂ ಸಣ್ಣಮಟ್ಟ ಗುತ್ತಿಗೆದಾರರಿಗೂ ಸಹ ಹಣ ನೀಡದ ಕಾರಣ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತುಂಬಾ ತೊಂದರೆಯಾಗಿದೆಯೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ವರ್ಷಕ್ಕೆ ಒಂದು ಲಕ್ಷ, ಎರಡು ಲಕ್ಷ ಸಸಿಗಳನ್ನು ನೆಟ್ಟೆವು ಎಂಬ ಹಿರಿಮೆಗಿಂತಲೂ, ಮಾಡುವ ಕೆಲಸಗಳು ಸಾರ್ಥಕವಾಗಿರಬೇಕೆಂಬ ಉದ್ದೇಶವಿಟ್ಟುಕೊಂಡು, ಸಸಿಗಳನ್ನು ಸೂಕ್ತವಾದ ಜಾಗಗಳಲ್ಲಿ, ಅವಶ್ಯಕತೆ ಇರುವ ಕಡೆ, ಬೆಳವಣಿಗೆ ಗಾತ್ರವನ್ನು ಅವಲಂಬಿಸಿ ಒಂದು ಗಿಡಕ್ಕೂ ಇನ್ನೊಂದು ಗಿಡಕ್ಕೂ ಅಂತರ ಇರುವಂತೆ ನೋಡಿಕೊಂಡು, ಒಂದು ವಾರ್ಡ್‌ಗೆ ತಲಾ 5000 ಸಸಿಗಳಂತೆ ನೆಟ್ಟು, ಅವುಗಳನ್ನು ಮಳೆಗಾಳಿ, ದನಕರುಗಳಿಂದ ರಕ್ಷಣೆ ಮಾಡಿ, ಬೇಸಿಗೆಯಲ್ಲಿ ನೀರು ಹಾಕಿ ಸಂರಕ್ಷಣೆ ಮಾಡಬೇಕೆಂದು ಸೂಚಿಸಿದರು. ಹಲವಾರು ಕಾರಣಗಳಿಂದ ಕೆಲವು ಸಸಿಗಳು ನಾಶ ಹೊಂದುತ್ತವೆ, ಅಂತಹ ಜಾಗಗಳಲ್ಲಿ ಮತ್ತೆ ಸಸಿಗಳನ್ನು ನೆಡಬೇಕೆಂದು ಸೂಚಿಸಿದರು. ಇದರಿಂದ ಹಸಿರು ವಾತಾವರಣ ನಿರ್ಮಾಣವಾಗುತ್ತದೆಂದು ತಿಳಿಸಿದರು.

ನಂತರ, ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಉದ್ಯಾನವನಗಳ ಅಭಿವೃದ್ಧಿ ಮತ್ತು ಕಾಮಗಾರಿಗಳ ನಿರ್ವಹಣೆ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡುವಂತೆ ಸೂಚಿಸಿದರು.

**ಶ್ರೀ.ಡಿ.ಎಂ.ಸುಬ್ಬಣ್ಣ, ತೋಟಗಾರಿಕೆ ಅಧೀಕ್ಷಕರು(ದಕ್ಷಿಣ)** ರವರು ಮಾತನಾಡುತ್ತಾ, ಈಗಾಗಲೇ ನಿರ್ವಹಿಸಿದ ಯಾವುದೇ ಕೆಲಸ ಕಾಮಗಾರಿಗಳಿಗೆ ಜಾಬ್‌ಕೋಡ್ ಆಗಿಲ್ಲವೆಂದು ಇದರಿಂದ ತುಂಬಾ ತೊಂದರೆಯಾಗಿದೆಯೆಂದು ಮನವಿ ಮಾಡಿದರು. ಬಡ್ಜೆಟ್‌ನಲ್ಲಿ ತೋಟಗಾರಿಕೆ ಇಲಾಖೆಗೆ ಬಹಳ ಕಡಿಮೆ ಅನುದಾನ ಮೀಸಲಿರಿಸಿದ್ದು, ಇದರಿಂದ ಉದ್ಯಾನವನಗಳ ನಿರ್ವಹಣೆಗೆ ಹಣ ಸಾಕಾಗುವುದಿಲ್ಲವೆಂದು ಹೆಚ್ಚಿನ ಬಡ್ಜೆಟ್‌ನ ಅವಶ್ಯಕತೆ ಇದೆಯೆಂದು ತಿಳಿಸಿದರು. ಮಳೆಗಾಲದಲ್ಲಿ ಕಳೆಗಳು ಜಾಸ್ತಿ ಬೆಳೆದಿರುತ್ತವೆ ಅವುಗಳನ್ನು ತೆಗೆಯಲು ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ಉದ್ಯಾನವನದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ 2001-02ನೇ ಸಾಲಿನಲ್ಲಿ ನೀಡುತ್ತಿರುವ ದರಗಳನ್ನು ಈಗಲೂ ನೀಡಲಾಗುತ್ತಿದ್ದು, ಅವರುಗಳಿಗೆ ವೇತನ ಪರಿಷ್ಕರಣೆ ಮಾಡಿದರೆ ಉದ್ಯಾನವನಗಳ ನಿರ್ವಹಣೆಯಲ್ಲಿ ಉತ್ತಮ ಫಲಿತಾಂಶ ಕಾಣುತ್ತದೆಂದು ಮನವಿ ಮಾಡಿದರು..

**ಅಧ್ಯಕ್ಷರು** : ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿ ವಾಯುವಿಹಾರಕ್ಕೆ ಬರುವ ವಯಸ್ಸಾದ ವೃದ್ಧರಿಗೆ ಹಾಗೂ ಶುಗರ್ ಪೇಷೆಂಟ್ ಹಾಗೂ ಕಿಡ್ನಿ ತೊಂದರೆ ಇರುವಂತಹ ರೋಗಿಗಳಿಗೆ ಹಾಗೂ ಹೆಂಗಸರು, ಮಕ್ಕಳಿಗೆ ಅನುಕೂಲ ಕಲ್ಪಿಸುವ ದೃಷ್ಠಿಯಿಂದ, ಜನದಟ್ಟಣೆ ಇರುವಂತಹ ಪ್ರದೇಶಗಳಲ್ಲಿನ ಉದ್ಯಾನವನಗಳಲ್ಲಿ ಹಾಗೂ ದೊಡ್ಡ ದೊಡ್ಡ ಉದ್ಯಾನವನಗಳಲ್ಲಿ ಪ್ರತ್ಯೇಕ ಜಾಗವನ್ನು ಗುರುತಿಸಿ ಕಡ್ಡಾಯವಾಗಿ ಶೌಚಾಲಯಗಳನ್ನು ನಿರ್ಮಿಸಬೇಕೆಂದು ಸೂಚಿಸಿದರು.

**ಶ್ರೀ.ಎಂ.ಪುಟ್ಟಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ(ದಕ್ಷಿಣ)** ರವರು ಮಾತನಾಡುತ್ತಾ, ದಿನಾಂಕ: 05-06-2011 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಒಂದು ಲಕ್ಷ ಗಿಡಗಳನ್ನು ನೆಡಲು ತಿಳಿಸಿದ್ದಾರೆ. ಆದರೆ ಸಾಂಕೇತಿಕವಾಗಿ 100 ರಿಂದ 200 ಗಿಡಗಳನ್ನು ನೆಡಬಹುದು.

**ಅಧ್ಯಕ್ಷರು** : ಪರಿಸರ ದಿನಾಚರಣೆಯನ್ನು ಸಸಿಗಳನ್ನು ನೆಡುವ ಮೂಲಕ ಉತ್ತಮವಾಗಿ ಸೂಕ್ತ ರೀತಿಯಲ್ಲಿ ಆಚರಿಸಬಹುದು. ಆದರೆ ಸಸಿಗಳ ಅಂಕಿ ಅಂಶಗಳನ್ನು ಮಾಡುವುದು ಬೇಡವೆಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡುವಂತೆ ಸೂಚಿಸಿದರು.

**ಶ್ರೀ.ಎನ್.ಪಿ.ಚಂದ್ರಶೇಖರ್, ಕಾರ್ಯಪಾಲಕ ಅಭಿಯಂತರರು(ಕೆರೆಗಳು)** ರವರು ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯ ಕೆರೆಗಳಲ್ಲಿ ಯಾವ ಯಾವ ಹಂತಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತಿವೆ ಎಂಬ ಬಗ್ಗೆ ಸಂಕ್ಷಿಪ್ತವಾಗಿ ಸಭೆಯಲ್ಲಿ ವಿವರಣೆ ನೀಡಿದರು. ಕೆರೆಗಳಲ್ಲಿ ಆಗಿರುವ ಒತ್ತುವರಿಯನ್ನು ಗುರುತಿಸಿ ತೆರವುಗೊಳಿಸಲು ಏಜೆನ್ಸಿಗಳಿಂದ ಸರ್ವೇಯರ್‌ಗಳನ್ನು ಕರೆಸಿ ಒತ್ತುವರಿಯನ್ನು ಗುರುತಿಸಿದ್ದು, ಈ ಬಗ್ಗೆ ಕಡತವನ್ನು ವಿಶೇಷ ಆಯುಕ್ತರು(ಯೋಜನೆ)ರವರಿಗೆ ಕಳುಹಿಸಿದರೆ ಅಗತ್ಯವಿಲ್ಲವೆಂದು ಬರೆದು ಕಳುಹಿಸಿದ್ದಾರೆ. ಆದರೆ, ಈ ಜಾಗವು ಪಾಲಿಕೆಯ ಜಾಗವಾಗಿದ್ದು, ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುತ್ತದೆಂದು ತಿಳಿಸಿದರು.

**ಅಧ್ಯಕ್ಷರು** ಎಲ್ಲಾ ಕೆರೆಗಳಲ್ಲಿ ಒತ್ತುವರಿ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಈ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ತಿಳಿಸಿದರು. ಎಸ್ಟಿಮೇಟ್ ಮಾಡುವಾಗ ತುರ್ತು ಕಾಮಗಾರಿಗಳಿಗೆಂದು ಹಣವನ್ನು ಮೀಸಲಿಡುವಂತೆ ಸೂಚಿಸಿದರು.

ಸಭೆಯಲ್ಲಿ ಹಾಜರಿರುವ ಅಧಿಕಾರಿಗಳನ್ನು ಉದ್ದೇಶಿಸಿ, ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಕುಂದುಕೊರತೆಗಳಿದ್ದರೂ ಸಹ ಸಮಿತಿಗೆ ವರದಿ ಮಾಡುವಂತೆ ಸೂಚಿಸಿದರು. ಸಮಿತಿಯಲ್ಲಿ ಉತ್ತಮ ಗುಣಮಟ್ಟದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಮ್ಮೆಲ್ಲರ ಸಲಹೆ, ಸಹಕಾರಗಳು ಅತ್ಯಮೂಲ್ಯವಾಗಿದೆಯೆಂದು ತಿಳಸಿದರು.

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಹಾಗೂ ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು :–</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರಿಗೆ ಕಳುಹಿಸಲಾಗಿದೆ.*
- ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಲಾಗಿದೆ.
- ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ಮತ್ತು (ದಕ್ಷಿಣ) *ರವರಿಗೆ ಕಳುಹಿಸಲಾಗಿದೆ.*
- ಕಛೇರಿ ಪ್ರತಿ